# ಸೇತುಬಂಧ ಸಾಫಲ್ಯ ಪರೀಕ್ಷೆ 2026-27

## ವಿಷಯ: ಸಮಾಜ ವಿಜ್ಞಾನ ತರಗತಿ: 6ನೇ ಅಂಕಗಳು: 10 ಸಮಯ: 45 ನಿ

ವಿದ್ಯಾರ್ಥಿಯ ಹೆಸರು: ______________________________ ಹಾಜರಾತಿ ಸಂಖ್ಯೆ: __________

---

**ಪ್ರಶ್ನೆ 1: ಕೆಳಗಿನ ಸಂಪನ್ಮೂಲಗಳನ್ನು 'ನವೀಕರಿಸಬಹುದಾದ' ಹಾಗೂ 'ನವೀಕರಿಸಲಾಗದ' ಸಂಪನ್ಮೂಲಗಳಾಗಿ ವರ್ಗೀಕರಿಸಿ.**

ಸೌರಶಕ್ತಿ, ಕಲ್ಲಿದ್ದಲು, ಗಾಳಿ (ಪವನ ಶಕ್ತಿ), ಪೆಟ್ರೋಲಿಯಂ, ಜಲಶಕ್ತಿ, ನೈಸರ್ಗಿಕ ಅನಿಲ, ಮಣ್ಣು, ಕಬ್ಬಿಣದ ಅದಿರು, ಅರಣ್ಯ ಸಂಪತ್ತು, ಚಿನ್ನ.

| ಕ್ರಸಂ | ನವೀಕರಿಸಬಹುದಾದ | ನವೀಕರಿಸಲಾಗದ |
|---|---|---|
| | | |
| | | |
| | | |
| | | |
| | | |

**ಪ್ರಶ್ನೆ 2: ಸಂಪನ್ಮೂಲಗಳ ಸಂರಕ್ಷಣೆಯನ್ನು ಉತ್ತೇಜಿಸಲು ಈ ಕೆಳಗಿನವುಗಳಲ್ಲಿ ಯಾವುದು ಅತ್ಯುತ್ತಮ ಕ್ರಮವಾಗಿದೆ?**

ಎ) ದೊರೆಯುವ ಎಲ್ಲ ಸಂಪನ್ಮೂಲಗಳನ್ನು ಒಂದೇ ಬಾರಿ ಬಳಸಿ ಖಾಲಿ ಮಾಡುವುದು.

ಬಿ) ಮರುಬಳಕೆ (Recycle) ಮತ್ತು ಕಡಿಮೆ ಬಳಕೆ (Reduce) ಮಾಡುವುದು.

ಸಿ) ಕೇವಲ ನವೀಕರಿಸಲಾಗದ ಸಂಪನ್ಮೂಲಗಳನ್ನು ಮಾತ್ರ ಅವಲಂಬಿಸುವುದು.

ಡಿ) ಅರಣ್ಯಗಳನ್ನು ಕಡಿದು ಹೆಚ್ಚು ಕಾರ್ಖಾನೆಗಳನ್ನು ಸ್ಥಾಪಿಸುವುದು.

ಉತ್ತರ)______________________________________________________________

**ಪ್ರಶ್ನೆ 3: ಹನಿ ನೀರಾವರಿ ಪದ್ಧತಿಯ ಅನುಕೂಲಗಳೇನು?**

ಉತ್ತರ)______________________________________________________________

______________________________________________________________

______________________________________________________________

______________________________________________________________

______________________________________________________________

**ಪ್ರಶ್ನೆ 4: ಕೃಷಿಯ ಹಂತಗಳನ್ನು ಅನುಕ್ರಮವಾಗಿ ಜೋಡಿಸಿ ಬರೆಯಿರಿ**

(ಪ್ರಾಣಿ ಪಕ್ಷಿ ಕೀಟ ಮತ್ತು ರೋಗಗಳಿಂದ ಬೆಳೆಗಳನ್ನು ರಕ್ಷಿಸುವುದು, ನೆಲವನ್ನು ಉಳುಮೆ ಮಾಡುವುದು, ಬೀಜಗಳನ್ನು ಬಿತ್ತುವುದು , ಗೊಬ್ಬರ ಹಾಕುವುದು , ಕಟಾವು ಮಾಡುವುದು , ನೀರು ಹಾಯಿಸುವುದು)

ಉತ್ತರ:______________________________________________________________

______________________________________________________________

______________________________________________________________

______________________________________________________________

______________________________________________________________

______________________________________________________________

**ಪ್ರಶ್ನೆ 5: ಕಾಡುಗಳು ಇಲ್ಲದಿದ್ದರೆ ಪ್ರಾಣಿಗಳಿಗೆ ಏನಾಗುತ್ತದೆ?**

ಉತ್ತರ:______________________________________________________________

______________________________________________________________

______________________________________________________________

______________________________________________________________

______________________________________________________________

______________________________________________________________

**ಪ್ರಶ್ನೆ 6: ಅಳಿವಿನಂಚಿನಲ್ಲಿರುವ ಪ್ರಾಣಿಗಳನ್ನು ರಕ್ಷಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?**

ಉತ್ತರ:______________________________________________________________

______________________________________________________________

______________________________________________________________

______________________________________________________________

**ಪ್ರಶ್ನೆ 7: ಭೂಮಿಯ ನೈಸರ್ಗಿಕ ಉಪಗ್ರಹ ಯಾವುದು?**

ಉತ್ತರ:______________________________________________________________

**ಪ್ರಶ್ನೆ 8: ಭೂಮಿಯನ್ನು 'ನೀಲಿ ಗ್ರಹ' ಎಂದು ಕರೆಯಲು ಮುಖ್ಯ ಕಾರಣವೇನು?**

ಎ) ಭೂಮಿಯ ವಾತಾವರಣವು ನೀಲಿ ಬಣ್ಣದ ಅನಿಲಗಳಿಂದ ತುಂಬಿರುವುದರಿಂದ.

ಬಿ) ಭೂಮಿಯ ಮೇಲ್ಮೈಯಲ್ಲಿ ಹೆಚ್ಚಿನ ಪ್ರಮಾಣದಲ್ಲಿ ನೀರು ಇರುವುದರಿಂದ.

ಸಿ) ಭೂಮಿಯು ಸೂರ್ಯನ ಬೆಳಕನ್ನು ನೀಲಿ ಬಣ್ಣದಲ್ಲಿ ಪ್ರತಿಬಿಂಬಿಸುವುದರಿಂದ.

ಡಿ) ಭೂಮಿಯ ಮಣ್ಣು ನೀಲಿ ಬಣ್ಣದಲ್ಲಿರುವುದರಿಂದ.

*ಉತ್ತರ:* ________________________________________

**ಪ್ರಶ್ನೆ 9: ಭಾರತದ 'ವೈವಿಧ್ಯತೆಯಲ್ಲಿ ಏಕತೆ' ಎಂದರೇನು?**

ಉತ್ತರ:________________________________________________________

**ಪ್ರಶ್ನೆ 10 ಭಾರತದ ಕಲೆ ಮತ್ತು ಸಾಹಿತ್ಯವು ನಮ್ಮ ದೇಶದ ವೈಭವವನ್ನು ಹೇಗೆ ಹೆಚ್ಚಿಸಿದೆ?**

ಎ) ಕೇವಲ ಪಾಶ್ಚಾತ್ಯ ದೇಶಗಳ ಕಲೆಗಳನ್ನು ನಕಲು ಮಾಡುವುದರ ಮೂಲಕ.

ಬಿ) ನಮ್ಮ ಪ್ರಾಚೀನ ಸಂಸ್ಕೃತಿ, ಮೌಲ್ಯಗಳು ಮತ್ತು ಜೀವನದರ್ಶನವನ್ನು ಪ್ರತಿಬಿಂಬಿಸುವುದರ ಮೂಲಕ.

ಸಿ) ಕೇವಲ ಆಧುನಿಕ ಕಾಲದ ತಾಂತ್ರಿಕತೆಯನ್ನು ಪ್ರದರ್ಶಿಸುವುದರ ಮೂಲಕ.

ಡಿ) ಕಲೆ ಮತ್ತು ಸಾಹಿತ್ಯವನ್ನು ಕೇವಲ ಪ್ರದರ್ಶನಕ್ಕೆ ಮಾತ್ರ ಸೀಮಿತಗೊಳಿಸುವುದರ ಮೂಲಕ.

ಉತ್ತರ________________________________________________________

## ಸೇತುಬಂಧ ಸಾಫಲ್ಯ ಪರೀಕ್ಷೆ 2026-27

## ವಿಷಯ: ಸಮಾಜ ವಿಜ್ಞಾನ ತರಗತಿ: 6ನೇ ಅಂಕಗಳು: 10

---

**ಪ್ರಶ್ನೆ 1:** ನವೀಕರಿಸಲಾಗುವ-ಸೌರಶಕ್ತಿ, ಗಾಳಿ (ಪವನ ಶಕ್ತಿ), ಜಲಶಕ್ತಿ, ಅರಣ್ಯ ಸಂಪತ್ತು, , ಮಣ್ಣು,
ನವೀಕರಿಸಲಾಗದ-ಪೆಟ್ರೋಲಿಯಂ, ನೈಸರ್ಗಿಕ ಅನಿಲ ಕಲ್ಲಿದ್ದಲು ಕಬ್ಬಿಣದ ಅದಿರು, ಚಿನ್ನ

**ಪ್ರಶ್ನೆ 2:** ಮರುಬಳಕೆ (Recycle) ಮಾಡುವುದು. 2. ಅನಗತ್ಯ ಬಳಕೆಯನ್ನು ಕಡಿಮೆ ಮಾಡುವುದು (Reduce).

**ಪ್ರಶ್ನೆ 3**.ನೀರಿನ ಉಳಿತಾಯವಾಗುತ್ತದೆ, ಬೇರುಗಳಿಗೆ ನೇರವಾಗಿ ನೀರು ಸಿಗುವುದರಿಂದ ಸಸ್ಯಗಳು ಚೆನ್ನಾಗಿ ಬೆಳೆಯುತ್ತವೆ, ಕಳೆಗಳ ಹಾವಳಿ ಕಡಿಮೆ ಇರುತ್ತದೆ.

**ಪ್ರಶ್ನೆ 4.** ನೆಲವನ್ನು ಉಳುಮೆ ಮಾಡುವುದು, ಗೊಬ್ಬರ ಹಾಕುವುದು , ಬೀಜಗಳನ್ನು ಬಿತ್ತುವುದು, ನೀರು ಹಾಯಿಸುವುದು, ಪ್ರಾಣಿ ಪಕ್ಷಿ ಕೀಟ ಮತ್ತು ರೋಗಗಳಿಂದ ಬೆಳೆಗಳನ್ನು ರಕ್ಷಿಸುವುದು, ಕಟಾವು ಮಾಡುವುದು

**ಪ್ರಶ್ನೆ 5:** ಕಾಡುಗಳು ಪ್ರಾಣಿಗಳ ನೈಸರ್ಗಿಕ ಆವಾಸಸ್ಥಾನ. ಇವು ಇಲ್ಲದಿದ್ದರೆ ಪ್ರಾಣಿಗಳಿಗೆ ಆಹಾರ ಮತ್ತು ಆಶ್ರಯ ಸಿಗುವುದಿಲ್ಲ, ಇದರಿಂದ ಅವು ಅಳಿವಿನಂಚಿಗೆ ತಲುಪುತ್ತವೆ.

**ಪ್ರಶ್ನೆ 6:** ರಾಷ್ಟ್ರೀಯ ಉದ್ಯಾನವನಗಳು ಮತ್ತು ವನ್ಯಜೀವಿ ಧಾಮಗಳನ್ನು ಸ್ಥಾಪಿಸಿದೆ, ಬೇಟೆಯಾಡುವುದನ್ನು ಕಾನೂನುಬಾಹಿರಗೊಳಿಸಿದೆ ಮತ್ತು ಪ್ರಚಾರ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ.

**ಪ್ರಶ್ನೆ 7:** ಚಂದ್ರ

**ಪ್ರಶ್ನೆ 8**: ಬಿ) ಭೂಮಿಯ ಮೇಲ್ಮೈಯಲ್ಲಿ ಹೆಚ್ಚಿನ ಪ್ರಮಾಣದಲ್ಲಿ ನೀರು ಇರುವುದರಿಂದ.

ಪ್ರಶ್ನೆ 9: ಭಾರತದಲ್ಲಿ ವಿವಿಧ ಭಾಷೆ, ಧರ್ಮ, ಸಂಸ್ಕೃತಿ ಮತ್ತು ಆಹಾರ ಪದ್ಧತಿಗಳನ್ನು ಅನುಸರಿಸುವ ಜನರಿರಬಹುದು. ಆದರೂ, ನಾವೆಲ್ಲರೂ ಭಾರತೀಯರು ಎನ್ನುವ ಭಾವನೆ ನಮ್ಮನ್ನು ಒಂದಾಗಿರಿಸುತ್ತದೆ. ಇದನ್ನೇ 'ವೈವಿಧ್ಯತೆಯಲ್ಲಿ ಏಕತೆ' ಎನ್ನುತ್ತಾರೆ.

**ಪ್ರಶ್ನೆ 10:** ಬಿ) ನಮ್ಮ ಪ್ರಾಚೀನ ಸಂಸ್ಕೃತಿ, ಮೌಲ್ಯಗಳು ಮತ್ತು ಜೀವನದರ್ಶನವನ್ನು ಪ್ರತಿಬಿಂಬಿಸುವುದರ ಮೂಲಕ.